ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ4(2) ಪ್ರೌ.ಶಾ..ಸ.ಶಿ.ಜೇ.ಪಟ್ಟಿ/01/2020.21 ದಿನಾಂಕ:10.11.2021

# ಅಧಿಸೂಚನೆ

ವಿಷಯ :- ದಿನಾಂಕ:01.01.2021ರಲ್ಲಿ ಇದ್ದಂತೆ ಬೆಂಗಳೂರು ವಿಭಾಗದ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕರಡನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ :-1] ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ4(2)ಪ್ರೌ.ಶಾ. ಸ.ಶಿ.ಜೇ.ಪ.01/2021-22 ದಿನಾಂಕ: 15.07.2021,

2] ಸಹ ನಿರ್ದೇಶಕರು-1 ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ವಿಭಾಗ,ಆಯುಕ್ತರ ಕಛೇರಿ, ಬೆಂಗಳೂರು ರವರ ಪ.ಸಂ.ಅ1/ಪ್ರೌಶಾಶಿಜೇಪ/02/2019-20 ದಿನಾಂಕ:08-11-2021.

3] ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ: 02.09.2021 ಮತ್ತು 07.10.2021

****

ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ ರವರು ಉಲ್ಲೇಖ(2)ರನ್ವಯ ವಿವಿಧ ದಿನಾಂಕಗಳಂದು ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗೀಯ ಮಟ್ಟದಲ್ಲಿ ಪರಿಶೀಲನಾ ಸಮಿತಿಗಳನ್ನು ರಚಿಸುವ ಮೂಲಕ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕರಡು ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ [**www.schooleducation.kar.nic.in** ರಲ್ಲಿ] ಪ್ರಕಟಿಸಲಾಗಿದೆ.

ಈ ಕರಡು ತಾತ್ಕಾಲಿಕ ಪಟ್ಟಿಗೆ ಸಂಬಂಧಿಸಿದಂತೆ ಜಿಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ವ್ಯಾಪಕ ಪ್ರಚಾರ ಮಾಡುವುದು. ಮುಂದುವರೆದು ಸಂಘದ ಪದಾಧಿಕಾರಿಗಳಿಗೆ ಮತ್ತು ಸಹ ಶಿಕ್ಷಕರಿಗೆ ಕರಡು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿರುವ ಬಗ್ಗೆ ಸಾಮಾಜಿಕ ಜಾಲ ತಾಣಗಳ ಮೂಲಕ ಹಾಗೂ ಸ್ಥಳೀಯ ಪತ್ರಿಕೆಗಳ ಮೂಲಕ ಪ್ರಚುರ ಪಡಿಸುವುದು.

ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕರಡು ಪ್ರಕಟಣೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಕುರಿತು ಕೆಳಕಂಡಂತೆ ವೇಳಾ ಪಟ್ಟಿಯನ್ನು ನಿಗಧಿಪಡಿಸಿದೆ. ಈ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸಮರ್ಥನಿಯ ಪೂರಕ ದಾಖಲೆಗಳೊಂದಿಗೆ ನಿಗಧಿತ ದಿನಾಂಕದೊಳಗೆ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಇವರಿಗೆ ನಿಗಧಿತ ನಮೂನೆಯಲ್ಲಿ ನೇರವಾಗಿ ಸಲ್ಲಿಸುವುದು. ಈ ಸಂಬಂಧ ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಹೆಸರು ಇರುವ ಪುಟದ ಮುದ್ರಿತ ಪ್ರತಿಯನ್ನು **[Print out copy]** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಬೇರೆ ಕಛೇರಿಗಳಿಗೆ / ಈ ಕಛೇರಿಗೆ ಸಲ್ಲಿಸಲಾದ ಮನವಿಗಳನ್ನು ಮತ್ತು ನಿಗಧಿತ ದಿನಾಂಕದೊಳಗೆ ಸಲ್ಲಿಕೆಯಾಗದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಉಪನಿರ್ದೇಶಕರು(ಆಡಳಿತ)ರವರು ನೋಡಲ್ ಅಧಿಕಾರಿಗಳು ಹಾಗೂ ಸಂಬಂಧಿಸಿದ ಕಾರ್ಯನಿರ್ವಾಹಕರ ಸಹಯೋಗದೊಂದಿಗೆ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ನಿಯಮಾನುಸಾರ ಸರಿಪಡಿಸುವುದು. ಅಗತ್ಯವಿದ್ದಲ್ಲಿ ನಿಯಮಗಳನ್ನು ಉಲ್ಲೇಖಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡುವುದು. ತದನಂತರ ತಮ್ಮ ಜಿಲ್ಲೆಯ ಕ್ರೋಢೀಕೃತ ಪಟ್ಟಿಯೊಂದಿಗೆ ಬೆಂಗಳೂರು ವಿಭಾಗೀಯ ಸಹ ನಿರ್ದೇಶಕರ ಕಛೇರಿಗೆ ನಿಗದಿತ ದಿನಾಂಕದೊಳಗೆ ಹಾಜರಾಗಿ ತಿದ್ದುಪಡಿಗಳನ್ನು ಸರಿಪಡಿಸುವ ಬಗ್ಗೆ ಕ್ರಮವಹಿಸುವುದು. ಈ ಎಲ್ಲಾ ಕ್ರಮಗಳ ನಂತರ ಬೆಂಗಳೂರು ವಿಭಾಗೀಯ ಸಹ ನಿರ್ದೇಶಕರು ಅವರ ಹಂತದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯ ಕರಡನ್ನು ತಯಾರಿಸಲು ತುರ್ತಾಗಿ ಕ್ರಮವಹಿಸುವುದು. ಈ ಕ್ರಮದ ಪೂರ್ವದಲ್ಲಿ ಸಹ ನಿರ್ದೇಶಕರು ಬೆಂಗಳೂರು ವಿಭಾಗದ ಕಛೇರಿಯ ನಿರ್ಧಿಷ್ಠ ಅಧಿಕಾರಿ/ ಸಿಬ್ಬಂದಿಗಳನ್ನು ಗುರುತಿಸಿ ಸೂಕ್ತ ಕಛೇರಿ ಆದೇಶಗಳನ್ನು ಹೊರಡಿಸುವ ಮೂಲಕ ಜವಾಬ್ದಾರಿಯನ್ನು ನಿಗದಿ ಪಡಿಸುವುದು. ಯಾವುದೇ ನ್ಯೂನ್ಯತೆ ಮತ್ತು ಗೊಂದಲಗಳು ಪುನಃ ಕಂಡುಬಂದಲ್ಲಿ ಸದರಿ ಅಧಿಕಾರಿ / ಸಿಬ್ಬಂದಿ ವರ್ಗದವರನ್ನೇ ನೇರಹೊಣೆಗಾರನ್ನಾಗಿ ಮಾಡಲಾಗುವುದು. ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿದ ತರುವಾಯ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರು ತಾತ್ಕಾಲಿಕ ಕರಡು ಸೇವಾ ಜೇಷ್ಠತಾ ಪಟ್ಟಿಯಲ್ಲಿ ಎಲ್ಲಾ ಶಿಕ್ಷಕರ ವಿವರಗಳನ್ನು ಹಾಗೂ ಖಾಲಿ ಬಿಟ್ಟಿರುವ ಶಾಲೆಯ ವಿಳಾಸ, ಕರ್ತವ್ಯಕ್ಕೆ ಹಾಜರಾದ ದಿನಾಂಕಗಳು ಮುಂತಾದವುಗಳನ್ನು ಇನ್ನೊಮ್ಮೆ ಪರಿಶೀಲಿಸಿಕೊಂಡು ತಪ್ಪಿದ್ದಲ್ಲಿ ಸರಿಯಾದ ಮಾಹಿತಿಯನ್ನು ಪಡೆದು ಎಲ್ಲಾ ಕಾಲಂಗಳನ್ನು ಪೂರ್ಣಗೊಳಿಸಿ ಸಂಬಂಧಿಸಿದ ಶಿಕ್ಷಕರ ಗಮನಕ್ಕೆ ತಂದು ಸಲ್ಲಿಸುವ ಪಟ್ಟಿಯಲ್ಲಿ ತಮ್ಮ ಹಂತದಲ್ಲಿ ಭರ್ತಿ ಮಾಡಿ ದೃಢೀಕರಣದೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಿ ಸರಿಪಡಿಸುವ ಕ್ರಮವನ್ನು ಜವಾಬ್ದಾರಿಯಿಂದ ನಿರ್ವಹಿಸಲು ತಿಳಿಸಿದೆ ಹಾಗೂ ಮುಂದೆ ಏನಾದರೂ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಲೋಪದೋಷಗಳು ಕಂಡಬಂದಲ್ಲಿ ಅಂತಿಮ ಜೇಷ್ಠತಾ ಪಟ್ಟಿ ಸಲ್ಲಿಸುವ ಪ್ರಾಧಿಕಾರಿಗಳೇ ಹೊಣೆಗಾರಾಗುತ್ತೀರೆಂದು ಭಾವಿಸುವುದು.

**ಬೆಂಗಳೂರು ವಿಭಾಗದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ**

**ಕೈಗೊಳ್ಳಬೇಕಾದ ಕಾರ್ಯಗಳು ಹಾಗೂ ಕಾಲಮಿತಿ:**

| ಕ್ರಮ ಸಂಖ್ಯೆ | ಕಾರ್ಯ | ಜವಾಬ್ದಾರಿ | ನಿಗಧಿ ಪಡಿಸಿದ ಕಾಲಮಿತಿ |
|---|---|---|---|
| 1 | 2 | 3 | 4 |
| 1 | ಪ್ರಕಟಿಸಲಾದ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸಮರ್ಥನಿಯ ಪೂರಕ ದಾಖಲೆಗಳೊಂದಿಗೆ ನಿಗಧಿತ ಸಮಯದೊಳಗೆ ನಿಗದಿತ ನಮೂನೆಯಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. [ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಹೆಸರು ಇರುವ ಪುಟದ ಮುದ್ರಿತ ಪ್ರತಿಯೊಂದಿಗೆ] | ಸಂಬಂಧಿಸಿದ ಸಹ ಶಿಕ್ಷಕರು | **24.11.2021 [ಕಛೇರಿಯ ಅವಧಿಯೊಳಗೆ]** |
| 2 | ಮೇಲ್ಕಂಡಂತೆ ಸಲ್ಲಿಕೆಯಾದ ಪಟ್ಟಿಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಪರಿಶೀಲಿಸಿ ಕರಡು ದೃಢೀಕರಿಸಿ ಪೂರಕ ದೃಢೀಕೃತ ದಾಖಲೆಗಳೊಂದಿಗೆ ಆಯಾ ವಿಭಾಗೀಯ ಸಹ ನಿರ್ದೇಶಕರಿಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ಸಲ್ಲಿಸುವುದು. | ಜಿಲ್ಲಾ ಉಪನಿರ್ದೇಶಕರು (ಆಡಳಿತ) | **02.12.2021** |
| 3 | ಅಂತಿಮ ಜೇಷ್ಠತಾ ಪಟ್ಟಿಯ ಕರಡನ್ನು ಅನುಮೋದನೆಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. | ಆಯ್ಕೆ ಪ್ರಾಧಿಕಾರಿಗಳು ಹಾಗೂ ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ವಿಭಾಗ. | **08.12.2021** |

(ಕೃಷ್ಣಾಜಿ ಎಸ್. ಕರಿಚಣ್ಣವರ್)
ನಿರ್ದೇಶಕರು (ಪ್ರೌಢ ಶಿಕ್ಷಣ)

ಇವರಿಗೆ :

1. ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಬೆಂಗಳೂರು ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ಬೆಂಗಳೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಮಾಹಿತಿಗಾಗಿ.

ನಮೂನೆ

**01/01/2021 ರಲ್ಲಿದ್ದಂತೆ ಬೆಂಗಳೂರು ವಿಭಾಗದ ಪ್ರೌಢಶಾಲಾ ಸಹಶಿಕ್ಷಕರ ಗ್ರೇಡ್-2 ವೃಂದ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ (ಪ್ರಕಟಣೆ ದಿ:10/11/2021)**

| ವಿವರ | New Seni-ority No | Old Seni-ority No | Block Sl No | Division | Disrict Name | Candidate Name | Present working school name | Date of Birth | Sex | Qualification | Selection/ Promotion/ Transfer, Date to Sec School Asst G-2 in Mys Divn | Entry into Service | Subject | Total Merit | Caste | DR/ Or/ PR/ Or TR | Master Degree | Remarks |
|---|---|---|---|---|---|---|---|---|---|---|---|---|---|---|---|---|---|---|
| ಹಾಲಿ ಇರುವ ವಿವರ | | | | | | | | | | | | | | | | | | |
| ತಿದ್ದುಪಡಿಯಾಗಬೇಕಿರುವ ವಿವರ | | | | | | | | | | | | | | | | | | |
| ಸಮರ್ಥನೆಯೊಂದಿಗೆ ಲಗತ್ತಿಸಿರುವ ದಾಖಲೆಗಳು | | | | | | | | | | | | | | | | | | |

**ವಿಶೇಷ ಸೂಚನೆ:** ಆಕ್ಷೇಪಣೆ ಸಲ್ಲಿಸುವ ಸಹಶಿಕ್ಷಕರು ನಮೂನೆಯೊಂದಿಗೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಕರಡು ತಾತ್ಕಾಲಿಕ ಜೇಷ್ಠತಾಪಟ್ಟಿಯಲ್ಲಿ ಅವರ ಹೆಸರಿರುವ ಪುಟದ ಪ್ರಿಂಟ್‌ಔಟ್ ಪ್ರತಿ ಲಗತ್ತಿಸಿ ಸಲ್ಲಿಸಬೇಕು.

ದಿನಾಂಕ: ದೃಢೀಕರಣ ಶಿಕ್ಷಕರ ಹೆಸರು, ಸಹಿ

ಸ್ಥಳ: ಮುಖ್ಯ ಶಿಕ್ಷಕರು ಮೊಹರಿನೊಂದಿಗೆ ಮೊಬೈಲ್ ಸಂಖ್ಯೆ

---

**ಉಪನಿರ್ದೇಶಕರ ಷರಾಗಳು:~**

**01.** ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ತಿದ್ದುಪಡಿಗಾಗಿ ಶಿಫಾರಸ್ಸು ಮಾಡಿದೆ.

ಅಥವಾ

**02.** ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಈ ಕೆಳಕಂಡ ಕಾರಣಗಳಿಂದ/ಹಿಂದಿನ ಬದಿಯಲ್ಲಿ ತೋರಿದ ಕಾರಣಗಳಿಗಾಗಿ ತಿರಸ್ಕರಿಸಿದೆ.

ಪರಿಶೀಲಿಸಿ ದೃಢೀಕರಿಸಿದೆ

ಉಪನಿರ್ದೇಶಕರು (ಆಡಳಿತ)

ಸಾ.ಶಿ.ಇ. ____________ಜಿಲ್ಲೆ.